**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ 27-03-2019ರಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಇಲಾಖೆಯ ಇತರೆ ಹಿರಿಯ ಅಧಿಕಾರಿಗಳೊಡನೆ ನಡೆದ ವಿಡೀಯೊ ಸಂವಾದದ ನಡವಳಿಗಳು.**

ಪ್ರಾರಂಭದಲ್ಲಿ ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆರವರು, ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತಿತ್ತರೆ ಹಿರಿಯ ಅಧಿಕಾರಿಗಳಿಗೆ ವಿಡಿಯೋ ಸಂವಾದದ ಪ್ರಗತಿ ಪರಿಶೀಲನಾ ಸಭೆಗೆ ಸ್ವಾಗತವನ್ನು ಕೋರಿ ವಿಡಿಯೋ ಸಂವಾದ ನಡೆಸಿಕೊಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿರವರನ್ನು ವಿನಂತಿಸಿದರು.

ಪ್ರಾರಂಭದಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಬಾಬ್ತು ಹಾಗೂ ವಿಷಯಸೂಚಿಯನ್ವಯ ಇತರೆ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಇಂಧೀಕರಿಸಿದ ಮಾಹಿತಿಯನ್ನು ಎಲ್ಲರಿಗೂ ತಲುಪಿಸಲಾಗಿದ್ದು, ಅದರಂತೆ ಕುಡಿಯುವ ನೀರು ನೈರ್ಮಲ್ಯ ಬಾಬ್ತಿನ ಜಿಲ್ಲಾವಾರು ಪ್ರಗತಿ ಪರಿಶೀಲನೆ ನಡೆಸಲಾಯಿತು. ತದನಂತರ ಆಯುಕ್ತರು ನರೇಗಾ, ನಿರ್ದೇಶಕರು ಗ್ರಾಮ ವಿಕಾಸ, ನಿರ್ದೇಶಕರು PR-I, PR-II, ಮತ್ತಿತ್ತರೆ ಇಲಾಖಾ ಅಧಿಕಾರಿಗಳೊಡನೆ ವಿಡೀಯೊ ಸಂವಾದ ನಡೆಸಿ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

1. ದಿನಾಂಕ 27.03.2019 ರಂತೆ ರೂ.2,422.00 ಕೋಟಿ ವೆಚ್ಚವಾಗಿರುವುದಾಗಿ ಆಯುಕ್ತರು ಗ್ರಾನೀಸರವರಿಂದ ತಿಳಿದು ಬಂದಿದ್ದು ಪ್ರಗತಿ ಆಧರಿಸಿ ಮಾರ್ಚ್-2019ರ ಅಂತ್ಯದೊಳಗೆ ರೂ.2,700.00 ಕೋಟಿ ವೆಚ್ಚ ದಾಖಲಿಸಲು ತಿಳಿಸಲಾಯಿತು.
2. ಆರ್ಥಿಕ ವೆಚ್ಚಕ್ಕೆ ಪೂರಕವಾಗಿ ಯೋಜನಾವಾರು ಭೌತಿಕ ಸಾಧನೆ ಮಾಡಿ IMISನಲ್ಲಿ ಮಾಹಿತಿ ಇಂಧೀಕರಿಸಬೇಕು.
3. IMIS ನಲ್ಲಿ ದಾಖಲಾಗಿರುವ ವೆಚ್ಚಕ್ಕೂ ಮತ್ತು ವರದಿಯಾಗಿರುವ ಜಿಲ್ಲಾವಾರು ವೆಚ್ಚಕ್ಕೂ ರೂ.324.00 ಕೋಟಿ ವ್ಯತ್ಯಾಸ ಇರುವುದನ್ನು Re-conciliation ಮಾಡಿ update ಮಾಡಬೇಕು.
4. **ದಿನಾಂಕ 31.05.2019 ರೊಳಗೆ 2017-18ರ ಸಾಲಿಗೆ ಮುನ್ನ ಪ್ರಾರಂಭಿಸಿರುವ** ಎಲ್ಲಾ ಮುಂದುವರೆದ ಮತ್ತು 2018-19ರಲ್ಲಿ **ಕೈಗೊಂಡಿರುವ <ರೂ.5 ಲಕ್ಷ ಅಂದಾಜು ಮೊತ್ತದ** ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ವಿಶೇಷ ಸಂದರ್ಭ ಹೊರತುಪಡಿಸಿ ಯಾವುದೇ ಹಳೆಯ ಕಾಮಗಾರಿಗಳನ್ನು 2019-20ರ ಸಾಲಿಗೆ ಮುಂದುವರೆಸಲು ಅವಕಾಶವಿರುವುದಿಲ್ಲ ಮತ್ತು ಅಂತಹ ಕಾಮಗಾರಿಗಳ ಬಿಲ್ ಪಾವತಿಗೆ ಅನುದಾನ ಲಭ್ಯವಾಗುವುದಿಲ್ಲವೆಂದು ಈಗಾಗಲೇ ತಿಳಿಸಲಾಗಿದ್ದು, ಮತ್ತೊಮ್ಮೆ ಈ ಅಂಶವನ್ನು ಸ್ಪಷ್ಟಪಡಿಸಲಾಯಿತು.
5. **<ರೂ.5 ಲಕ್ಷ ಅಂದಾಜು ಕಡಿಮೆ ಮೊತ್ತದ ಕಾಮಗಾರಿಗಳನ್ನು** ಅಥವಾ ಯಾವುದೇ ಅನುಮೋದಿತ ಸಣ್ಣ ಪ್ರಮಾಣದ ಕುಡಿಯುವ ನೀರಿನ ಕಾಮಗಾರಿಗಳಿಗೆ ಅನುಮೋದನೆ ಪಡೆದು ಇನ್ನೂ ಪ್ರಾರಂಭಿಸದಿದ್ದಲ್ಲಿ, ಅಂತಹ ಕಾಮಗಾರಿಗಳನ್ನು IMIS ನಿಂದ ಅಗತ್ಯವಿಲ್ಲವೆಂದು delete ಮಾಡಲು ಪ್ರಸ್ತಾಪಿಸಿ, ಅವುಗಳನ್ನು 2019-20ರ ಸಾಲಿನಲ್ಲಿ ಅಗತ್ಯತೆಯನುಸಾರ ಕೈಗೆತ್ತಿಕೊಳ್ಳಲು ಕ್ಷಿಪ್ರ ಕ್ರಮ ಕೈಗೊಳ್ಳಬೇಕು. ಆದರೆ, ಕಾಮಗಾರಿ ಕೈಬಿಟ್ಟ ನೆಪದಿಂದ, ಸದರಿ ಕಾಮಗಾರಿಯನ್ನು ಅಗತ್ಯತೆಯಿಲ್ಲದಿದ್ದರೂ ಮುಂದಿನ ಸಾಲಿನಲ್ಲಿ ಸೇರಿಸಿಕೊಳ್ಳುವ ಯಾವುದೇ ಪ್ರಯತ್ನ ಸಲ್ಲದು ಎಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು.

6. District Tender Bulletin ಪ್ರಕ್ರಿಯೆಗಳನ್ನು ಶಿಸ್ತು ಬದ್ಧವಾಗಿ ನಡೆಸಬೇಕು. ಈ ಸಂಬಂಧ ಆಯುಕ್ತರು, ಗ್ರಾನೀಸ ನೀಡಿದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
7. ಎಸ್.ಸಿ.ಪಿ/ಟಿ.ಎಸ್.ಪಿ ಮತ್ತು ಎಸ್.ಡಿ.ಪಿ.ಯಡಿ ಪ್ರಗತಿ ತೀವ್ರಗೊಳಿಸಬೇಕು. ಚಿತ್ರದುರ್ಗ, ಚಾಮರಾಜನಗರ, ಜಿಲ್ಲೆಗಳಲ್ಲಿ ಸದರಿ ಪಂಗಡದ ಜನವಸತಿಗಳು ಹೆಚ್ಚಾಗಿದ್ದು, ಅಗತ್ಯವಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಲಭ್ಯವಿರುವ ಅನುದಾನ ಸದ್ವಿನಿಯೋಗವಾಗುವಂತೆ ನೋಡಿಕೊಳ್ಳತಕ್ಕದ್ದು.
8. ಒಟ್ಟಾರೆ ಕುಡಿಯುವ ನೀರಿನ ಬಾಬ್ತಿನಡಿ ವೆಚ್ಚ OB ಮತ್ತು ಹಂಚಿಕೆಯಾದ ಅನುದಾನಕ್ಕೆ ಹೋಲಿಸಿದಾಗ ಕಡಿಮೆಯಾಗಿದ್ದು, ಪ್ರಗತಿ ತೀವ್ರಗೊಳಿಸಬೇಕು.
9. ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ, ಇಂಜಿನಿಯರಿಂಗ್ ವಿಭಾಗದಲ್ಲಿ ತುಂಡುಗುತ್ತಿಗೆ ಕಾಮಗಾರಿಗಳನ್ನು ವಹಿಸುವಲ್ಲಿ ವಿಳಂಬ ಹಾಗೂ ಒಂದೇ ಕಾಮಗಾರಿಯನ್ನು ಎರಡು ಏಜೆನ್ಸಿಗಳಿಗೆ ವಹಿಸಿಕೊಟ್ಟು ನಿರ್ಲಕ್ಷತೆ ತೋರಿರುವುದನ್ನು ಗಮನಿಸಿ ಈ ಕುರಿತಂತೆ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಆಯುಕ್ತರು, ಗ್ರಾನೀಸರವರು ಪರಿಶೀಲಿಸಿ ಯಾವುದೇ ರೀತಿಯ ಅಕ್ರಮ ಅವ್ಯವಹಾರವಾಗದಂತೆ ಎಚ್ಚರಿಕೆ ವಹಿಸುವುದು ಹಾಗೂ ಸಂಬಂಧಿಸಿದ AEE ಹಾಗೂ EEಗೆ ಎಚ್ಚರಿಕೆ ನೀಡಲಾಯಿತು.
10. ಟಾಸ್ಕ್‌ಫೋರ್ಸ್ ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗಾಗಿ, ರೂ.78.00 ಕೋಟಿ ಬಿಡುಗಡೆಯಾಗಿದ್ದು, ವೆಚ್ಚ ಕೇವಲ ರೂ.48.00 ಕೋಟಿ ಮಾತ್ರ ಆಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು. ಕೂಡಲೇ ಭೌತಿಕ ಪ್ರಗತಿ ತೀವ್ರಗೊಳಿಸಿ, ಆನ್‌ಲೈನ್‌ನಲ್ಲಿ ಆರ್ಥಿಕ ಪ್ರಗತಿ ಇಂಧೀಕರಿಸಲು ಸೂಚಿಸಲಾಯಿತು.
11. ಸ್ಥಳೀಯ ವಾಸ್ತವಿಕ ಅಗತ್ಯತೆ ಆಧರಿಸಿ, ಚಾಲ್ತಿ ಮಾರ್ಗಸೂಚಿಗಳನ್ವಯ ಮಾತ್ರ ಕ್ರಿಯಾಯೋಜನೆ ಸಿದ್ಧಪಡಿಸಬೇಕು.
12. ಯಾವುದೇ ಕಾರಣಕ್ಕೂ ಕಾಮಗಾರಿಗಳನ್ನು split ಮಾಡಬಾರದು. ಸ್ಥಳೀಯ Village Water & Sanitation and Committee (VWSSC) ಸಭೆಯ ಠರಾವಿನ ಆಧಾರದ ಮೇಲೆ ಅಗತ್ಯವಿರುವ ಹಾಗೂ ಕಾರ್ಯಸಿಂಧುತ್ವವಿರುವ ಕುಡಿಯುವ ನೀರಿನ ಕ್ರಿಯಾಯೋಜನೆಗಳನ್ನು ಕಾಲಮಿತಿಯೊಳಗೆ ರೂಪಿಸಬೇಕು. ಅನುದಾನ ಲಭ್ಯವಿದೆ ಎಂಬ ಮಾತ್ರಕ್ಕೆ ತುಂಡುಗುತ್ತಿಗೆ ಕಾಮಗಾರಿಗಳನ್ನು ಅಥವಾ ಟಾಸ್ಕ್‌ಫೋರ್ಸ್ ಕಾಮಗಾರಿಗಳು ಪ್ರಸ್ತಾಪವಾಗದಂತೆ ಆಯಾಯ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು.
13. ಇಂಜಿನಿಯರ್‌ಗಳಿಂದ ರೂಪಿತವಾಗುವ ಕ್ರಿಯಾ ಯೋಜನೆಗಳಲ್ಲಿ ತಾಂತ್ರಿಕ ಕೌಶಲ್ಯ, ಸಾರ್ವಜನಿಕ ಹಿತಾಸಕ್ತಿ, ತಾಂತ್ರಿಕ ಕಾರ್ಯಸಿಂಧುತ್ವ ಮತ್ತು ಪ್ರಾಮಾಣಿಕತೆಯಿರಬೇಕು. ಹೆಚ್ಚಿನ ಸಂಖ್ಯೆಯ ಕಾಮಗಾರಿಗಳ ಬದಲು ಕಾರ್ಯಸಿಂಧುತ್ವವಿರುವ ಯೋಜನೆಗಳನ್ನು ನಿರಂತರತೆ ದೃಷ್ಟಿಯಿಂದ ಗರಿಷ್ಠ ಮಿತವ್ಯಯ ದೃಷ್ಟಿ ಕೋನದಲ್ಲಿ ರೂಪಿಸಬೇಕು.
14. ನೀರು ಶುದ್ಧೀಕರಣ (WPP) ಘಟಕಗಳ ಅಳವಡಿಕೆ ಮತ್ತು ನಿರ್ವಹಣೆಗಾಗಿ ಪರಿಷ್ಕೃತ ಮಾನದಂಡಗಳನ್ನು ಸಿದ್ಧಪಡಿಸಿದ್ದು, ಸದ್ಯದಲ್ಲೇ ಅದನ್ನು ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ನೀಡಲಾಗುತ್ತದೆ.

15. 2019-20ನೇ ಸಾಲಿನ ಕ್ರಿಯಾಯೋಜನೆ ತಯಾರಿಕೆ ಸಂಬಂಧ ಏಪ್ರಿಲ್-2019ರ ಮೊದಲ ವಾರದಲ್ಲಿ ಪ್ರತ್ಯೇಕ ವಿಡೀಯೊ ಸಂವಾದ ನಡೆಸಿ ಅಗತ್ಯವಿರುವ ಮಾರ್ಗಸೂಚಿಗಳನ್ನು ನೀಡಲಾಗುತ್ತದೆ.

16. ಘನ ತ್ಯಾಜ್ಯ ಸಂಗ್ರಹಣೆ, ಸಂಸ್ಕರಣೆ ಮತ್ತು ವಿಲೇವಾರಿ ಕುರಿತಂತೆ ಈಗಾಗಲೇ ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಾಧ್ಯವಾದಷ್ಟು ಪಟ್ಟಣ ಪ್ರದೇಶಗಳಿಗೆ ಹೊಂದಿಕೊಂಡಿರುವ ಗುಂಪು ಗ್ರಾಮ ಪಂಚಾಯತಿಗಳು ಮತ್ತು ಹೆಚ್ಚಿನ ಜನಸಂಖ್ಯೆಯಿರುವ ಗ್ರಾಮಗಳನ್ನು ಒಳಗೊಂಡಂತೆ ಸಕ್ರಿಯವಾಗಿರುವ ಹೆಸರಾಂತ NGOs ಪಾಲ್ಗೊಳ್ಳುವಿಕೆಯನ್ನೊಳಗೊಂಡ ಪ್ರಸ್ತಾಪಗಳನ್ನು ಸಮರ್ಪಕವಾಗಿ ಸರ್ಕಾರಕ್ಕೆ ಸಲ್ಲಿಸಬೇಕು. ಈ ಸಂಬಂಧ ಅಗತ್ಯವಿದ್ದಲ್ಲಿ SLWM ತಂಡ ಜಿಲ್ಲೆಗಳಿಗೆ ತರಬೇತಿ ಮತ್ತು ಕ್ರಿಯಾಯೋಜನೆ ತಯಾರಿಕೆ ಸಲುವಾಗಿ ಭೇಟಿ ನೀಡಲಿದೆ.

17. LOB ಯಲ್ಲಿ FTOs ಜೊತೆಗೆ IMIS entry ಸಹ ಆಗಬೇಕು. ಪ್ರಗತಿ ಕಡಿಮೆ ಇರುವ ಜಿಲ್ಲೆಗಳಾದ ರಾಯಚೂರು, ಬೀದರ್, ವಿಜಯಪುರ, ಚಿತ್ರದುರ್ಗ, ಬೆಳಗಾವಿ, ಬಾಗಲಕೋಟೆ, ಕೊಪ್ಪಳ, ಧಾರವಾಡ, ಬಳ್ಳಾರಿ, ಮೈಸೂರು, ಕಲಬುರ್ಗಿ ಜಿಲ್ಲೆಗಳ CEOಗಳಿಗೆ ಜಾಗ್ರತೆ ಈ ಕಾರ್ಯಗಳನ್ನು ಮುಗಿಸಲು ಸೂಚಿಸಲಾಯಿತು.

18. IHHL ಬಾಬ್ತಿನಡಿ ಇನ್ನೂ ಪಾವತಿಸದಿರುವ ಮತ್ತು IMIS ನಲ್ಲಿ ದಾಖಲಿಸಿರುವ ಅನರ್ಹ ಫಲಾನುಭವಿಗಳ ಹೆಸರನ್ನು ಎಚ್ಚರಿಕೆಯಿಂದ ಪರಿಶೀಲಿಸಿ ತಕ್ಷಣ ರದ್ದು ಪಡಿಸಲು, ಆಯುಕ್ತರು, ಗ್ರಾನೀಸ & ನೈರ್ಮಲ್ಯ ಇಲಾಖೆರವರಿಗೆ ಪ್ರಸ್ತಾಪ ಕಳುಹಿಸಬೇಕು.

19. ಮರುಪಾವತಿ ಬಿಲ್‌ಗಳು, ನವೀಕರಣ ಪ್ರಸ್ತಾಪ ಬಿಲ್‌ಗಳು, ಮರುಹೊಂದಾಣಿಕೆ ಬಿಲ್‌ಗಳನ್ನು ಇಂದೇ ತಕ್ಷಣ ಸಲ್ಲಿಸಿ 2018-19ರಲ್ಲಿ ಲಭ್ಯವಾದ ಅನುದಾನ ವ್ಯಪಗತವಾಗದಂತೆ, ನಿಯಾಮನುಸಾರ ಬಿಲ್ ಪಾವತಿಗೆ ಕ್ರಮ ವಹಿಸಬೇಕು.

**(ಕ್ರಮ: ಆಯುಕ್ತರು, ಕಗ್ರಾನೀ ನೈರ್ಮಲ್ಯ ಇಲಾಖೆ, CE, RDWSD, SBM)**

20. ರಸ್ತೆಗಳು ಬಾಬ್ತಿನಡಿ ನಬಾರ್ಡ್, ಎಸ್.ಡಿ.ಪಿ ಹಾಗೂ 3054 ನಡಿ ಬಿಡುಗಡೆ ಮಾಡಿರುವ ಅನುದಾನವನ್ನು ಕಾಲಮಿತಿಯೊಳಗೆ ಭೌತಿಕ ಪ್ರಗತಿ ಸಾಧಿಸಿ ಲಭ್ಯವಾದ ಅನುದಾನ ಸದ್ಬಳಕೆಯಾಗಬೇಕೆಂದು ಸೂಚಿಸಲಾಯಿತು.

21. ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಮಗಾರಿಗಳನ್ನು ಚುನಾವಣಾ ನೀತಿ ಸಂಹಿತಿ ಪೂರ್ಣಗೊಂಡ ನಂತರ ಪ್ರಾರಂಭಿಸುವುದು. ಬಿಡುಗಡೆಯಾಗಿರುವ ಅನುದಾನ ವ್ಯಪಗತವಾಗದಂತೆ ಕಾಮಗಾರಿಗಳ ಪ್ರಗತಿ ಆಧರಿಸಿ ಬಿಲ್ ಪಾವತಿಸುವುದು.

22. 2017-18ನೇ ಸಾಲಿನ ಟಾಸ್ಕ್‌ಫೋರ್ಸ್ ಬಾಕಿ ಬಾಬ್ತು ರೂ.40.38 ಕೋಟಿ ಬಿಡುಗಡೆಯಾಗಿದ್ದು, ಅದನ್ನು 2017-18ನೇ ಸಾಲಿನ ವಿಶೇಷ ಅನುದಾನ (3054)ದಡಿ ಮಂಜೂರು ಮಾಡಿದ ಕಾಮಗಾರಿಗಳ ಬಾಕಿ ಬಿಲ್ ಪಾವತಿಸಲು ಬಳಸಿಕೊಳ್ಳುವುದು. ಈ ರೂ.199.17ಕೋಟಿಗಳನ್ನು COO, KRRDA ರವರಿಗೆ ಬಿಡುಗಡೆ ಮಾಡಲಾಗಿದ್ದು ಅದನ್ನು COO, KRRDA ಮುಖೇನ ಚೆಕ್ ಪಡೆದು ತಕ್ಷಣ ಪಾವತಿ ಪ್ರಕ್ರಿಯೆ ಮಾಡಬೇಕು.

23. ವಿಶೇಷ ಅನುದಾನದಡಿ ನಮ್ಮ ಹೊಲ ನಮ್ಮ ದಾರಿ ಹಾಗೂ ಇತರೆ 3054 ರಡಿ ಮಂಜೂರಾಗಿ ಜುಲೈ-2018ರ ಹಿಂದೆ ಆರಂಭಗೊಂಡಿರುವ ಕಾಮಗಾರಿಗಳ ಬಿಲ್ ಪಾವತಿಗೆ ಮಾತ್ರ ಈ ಅನುದಾನ ಬಳಕೆಯಾಗಬೇಕು.

24. ಸಿ.ಎಮ್.ಜಿ.ಎಸ್.ವೈ. ಲಿಂಕ್ ಡಾಕ್ಯುಮೆಂಟ್ ಬಾಬ್ತಿನಡಿ ರೂ.155.00 ಕೋಟಿ ಬಿಡುಗಡೆಯಾಗಿದ್ದು, ಕಾಮಗಾರಿಗಳನ್ನು ಜಾಗ್ರತೆಯಾಗಿ ಪೂರ್ಣಗೊಳಿಸಿ ಬಿಡುಗಡೆಯಾದ ಅನುದಾನ ವ್ಯಪಗತವಾಗದಂತೆ ನೋಡಿಕೊಳ್ಳಬೇಕು. 2018-19ರ ಸಾಲಿನ ಯಾವುದೇ ಕಾಮಗಾರಿಯನ್ನು ಮುಂದಿನ ವರ್ಷಕ್ಕೆ ಮುಂದುವರೆಸಬಾರದು.

25. 2018-19 ರಲ್ಲಿ 3054 ವಿಶೇಷ ಅನುದಾನದಲ್ಲಿ ಮಂಜೂರುಮಾಡಿ CE-PRED ಗೆ ವಹಿಸಿರುವ ರೂ.692.00 ಕೋಟಿ ಅಂದಾಜು ಮೊತ್ತದ 2,578 ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ವಿಳಂಬ ಸಲ್ಲದು. ಹಾಗೂ ಈ ಕಾಮಗಾರಿಗಳ ಟೆಂಡರ್‌ಗಳನ್ನು ಕರೆದಿರುವ ಹಾಗೂ ಏಜೆನ್ಸಿಗರಿಗೆ ವಹಿಸಿದ ಮಾಹಿತಿಯನ್ನು ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಇಂಧೀಕರಿಸಬೇಕು.

26. ಕಾಮಗಾರಿಗಳನ್ನು ಸಮರ್ಪಕವಾಗಿ ಪೂರ್ಣಗೊಳಿಸದೆ ಆರ್ಥಿಕ ಆಶಿಸ್ತು ಮಾಡಿದ್ದಲ್ಲಿ ಸಂಬಂಧಿಸಿದ ಇಂಜಿನಿಯರ್‌ಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಈ ಸಂಬಂಧ ದಾವಣಗೆರೆ, ಬಾಗಲಕೋಟೆ, ಮಂಡ್ಯ, ಮೈಸೂರು ಮತ್ತಿತ್ತರೆ ಜಿಲ್ಲೆಗಳಿಂದ ದೂರುಗಳು ಬಂದಿದ್ದು ಪರಿಶೀಲನೆ ಮಾಡಬೇಕು.

**(ಕ್ರಮ: CE, PRED & COO- KRRDA, ನಿರ್ದೇಶಕರು ಸುವರ್ಣ ಗ್ರಾಮೋದಯ)**

27. ಗ್ರಾಮ ವಿಕಾಸ ಯೋಜನೆಯಡಿ ಪ್ರಗತಿಯಲ್ಲಿರುವ 909 ಗ್ರಾಮಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಬೇಕು.

28. ಸುವರ್ಣ ಗ್ರಾಮೋದಯ ಯೋಜನೆ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಪ್ರಸಕ್ತ ಸಾಲಿನಲ್ಲಿ ಸ್ಥಳೀಯ ಶಾಸಕರ ಸಮಲೋಚನೆಯೊಂದಿಗೆ ಕಾಮಗಾರಿಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸಿ ಯೋಜನೆಗಳ ಮಂಜೂರಾತಿಗೆ ಪ್ರಸ್ತಾಪಿಸಬೇಕು.

**(ಕ್ರಮ: ನಿರ್ದೇಶಕರು, ಸುವರ್ಣ ಗ್ರಾಮೋದಯ)**

29. **ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:** 2018-19ರಲ್ಲಿ ನರೇಗಾ ಕಾರ್ಯಕ್ರಮದಡಿ ಉತ್ತಮ ಪ್ರಗತಿಯಾಗಿರುವುದನ್ನು ಶ್ಲಾಘಿಸಿ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಭಿನಂದನೆ ದಾಖಲಿಸಲಾಯಿತು.

30. ಈಗಾಗಲೇ ಹಿಂದಿನ ಸಭೆಗಳಲ್ಲಿ ನರೇಗಾ ಕಾರ್ಯಕ್ರಮದಡಿ ಒಗ್ಗೂಡಿಸಿಕೊಂಡು ಯಾವ ರೀತಿ ಅತ್ಯುತ್ತಮ ಪ್ರಗತಿ ಸಾಧಿಸಬಹುದೆಂದು ನಡವಳಿಗಳಲ್ಲಿ ಲಿಖಿತ ಸೂಚನೆ ನೀಡಲಾಗಿದೆಯೋ ಅದರನ್ವಯ 2019-20ರ ಕ್ರಿಯಾ ಯೋಜನೆ ಸಿದ್ದಪಡಿಸಿಕೊಂಡು ಏಪ್ರಿಲ್-ಮೇ/2019ರಲ್ಲಿ ಅನುಷ್ಠಾನ ಸಲುವಾಗಿ ಕ್ರಮ ಕೈಗೊಳ್ಳುವುದು.

31. ನರೇಗಾ ಕಾರ್ಯಕ್ರಮದಡಿ ಕೂಲಿ ಮತ್ತು ಸಾಮಗ್ರಿ ಬಜೆಟ್ ಚಾಲ್ತಿ ಮಾರ್ಗಸೂಚಿಯನ್ವಯ ಹೊಂದಾಣಿಕೆಯಾಗುವಂತೆ ಈಗಾಗಲೇ ನೀಡಿರುವ ಸವಿಸ್ತಾರವಾದ ಮಾರ್ಗಸೂಚಿಗಳಂತೆ ಕ್ರಮವಹಿಸಬೇಕು.

32. ಜಗಳೂರು ತಾಲ್ಲೂಕಿನಲ್ಲಿ ಗುರುತಿಸಲಾದ ಅಕ್ರಮ ಅವ್ಯವಹಾರಗಳ ಬಗ್ಗೆ ಪರಿಶೀಲಿಸಿ ವ್ಯತ್ಯಯಗಳಿದ್ದಲ್ಲಿ ಮತ್ತು ಉದ್ದೇಶಿತ ಸಂಚಿನ ಅವ್ಯವಹಾರ/ದುರ್ನಡತೆ ಕಂಡು ಬಂದಲ್ಲಿ ಸಂಬಂಧಿಸಿದವರ ಮೇಲೆ ಕ್ರಮ ಜರುಗಿಸಬೇಕು.

33. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು Job Card ನೀಡಿ ಬಿಲ್ ಪಾವತಿಸಿ ನಂತರ Job Cardಗಳನ್ನು delete ಮಾಡಿರುವ ಪ್ರಕರಣಗಳು ಕಂಡು ಬಂದಲ್ಲಿ ಇಂತಹ ಪ್ರಕರಣಗಳನ್ನು ಶಿಸ್ತು ಕ್ರಮಕ್ಕೊಳಪಡಿಸಲು ಗಂಭೀರವಾಗಿ ಪರಿಗಣಿಸಬೇಕು. ಇದಕ್ಕೆ ಕಾರಣರಾದ ಅಧಿಕಾರಿ/ನೌಕರರು/ಸಮಾಲೋಚಕರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.

34. 2019–20ರ ಕ್ರಿಯಾ ಯೋಜನೆ ಸಿದ್ದಪಡಿಸುವಾಗ KCST - IISC ರವರ ಸಮನ್ವಯದಲ್ಲಿ ಗುರುತಿಸಲಾಗಿರುವ ಕೆರೆ, ಕಟ್ಟೆ, ಕಲ್ಯಾಣಿಗಳು ಸೇರಿದಂತೆ 14000–ಜಲಮೂಲಗಳು ಮತ್ತು ಚೆಕ್ ಡ್ಯಾಮ್‌ಗಳು ಮತ್ತು ಸುಮಾರು 12000 ಮಳೆ ನೀರು ಕೊಯ್ಲು ಘಟಕಗಳನ್ನು ನಿರ್ಮಿಸುವುದಕ್ಕೆ ಪೂರಕವಾಗಿ ಅಂತರ್ಜಲ ಮರು ಪ್ರವಹಿಸುವ ಕಾಮಗಾರಿಗಳನ್ನು ಅಳವಡಿಸಬೇಕು.

35. ಜಲಾನಯನ, ಅರಣ್ಯಾಭಿವೃದ್ಧಿ, ಸಣ್ಣ ಕೆರೆಗಳು, ತೋಟಗಾರಿಕೆ, ಹೂಳೆತ್ತುವುದು, ಜಲಸಂರಕ್ಷಣೆ, ಕಾಮಗಾರಿಗಳಿಗೆ ಆಧ್ಯತೆ ನೀಡಬೇಕು. AFPRO ಸಂಸ್ಥೆ ಈಗಾಗಲೇ ಕೋಲಾರ, ಮುಳಬಾಗಿಲು ತಾಲ್ಲೂಕಿನಲ್ಲಿ ಗ್ರಾಮ ಮಟ್ಟದಲ್ಲಿ ನೀರಿನ ಆಯವ್ಯಯ ತಯಾರಿಸಿರುವುದನ್ನು ಬೇರೆ ಜಿಲ್ಲೆಗಳಲ್ಲಿಯೂ ಅನುಸರಿಸಬೇಕು. ಸದರಿ ಸಂಸ್ಥೆ Remote Sensing Organisation ಮಾಹಿತಿ ಆಧರಿಸಿ ಸಮುದಾಯ ಆಧಾರಿತ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸಮನ್ವಯದಲ್ಲಿ ಮಾಡಬಹುದಾದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕುರಿತು ಯೋಜನಾ ವರದಿ ಮತ್ತು ಕ್ರಿಯಾ ಯೋಜನೆ ಸಿದ್ದಪಡಿಸಿದೆ. ಅದೇ ಮಾದರಿಯಲ್ಲಿ ಸ್ಥಳೀಯ ತಾಲ್ಲೂಕು/ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿರುವ ಮಳೆ ಮಾಪನ ಮಾಹಿತಿ ಆಧರಿಸಿ ವಿವರಗಳನ್ನು ಪಡೆದುಕೊಂಡು ಕ್ರಿಯಾ ಯೋಜನೆ ಸಿದ್ಧಪಡಿಸಲು ಜಿಲ್ಲಾ ಪಂಚಾಯತ್‌ಗಳು ಕ್ರಮ ಕೈಗೊಳ್ಳಬಹುದಾಗಿದೆ.

36. ಈಗಾಗಲೇ ತಿಳಿಸಿರುವಂತೆ Secure ತಂತ್ರಾಂಶ ಬಳಸುವುದರಿಂದ ಸಾಮಾನ್ಯವಾಗಿ ಸಂಭವನೀಯ ಅಕ್ರಮ ಅವ್ಯವಹಾರಗಳಿಗೆ ತಂತ್ರಾಂಶದಿಂದ ಸಹಜ ಕಡಿವಾಣ ಬೀಳಲಿದ್ದು, ಸಾಮಗ್ರಿ ಮತ್ತು ಕೂಲಿ ಅಂದಾಜು ಪಟ್ಟಿ ಮತ್ತು ನರೇಗಾ ನಿಯಮಗಳ ಪಾಲಿಕೆಯಲ್ಲಿ ಸಮತೋಲನ ಕಾಯ್ದುಕೊಳ್ಳಲು ಮತ್ತು ಕ್ಷಿಪ್ರವಾಗಿ ಅಂದಾಜು ಪಟ್ಟಿ ತಯಾರಿಸಲು ಅನುಕೂಲವಾಗಲಿದೆ. ಆದುದರಿಂದ secure ತಂತ್ರಾಂಶವನ್ನು 15ನೇ ಏಪ್ರಿಲ್–2019 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಸರಿಸಲಾಗುವುದು. ಇದಕ್ಕೆ ಎಲ್ಲಾ CEO ಗಳು ಅಗತ್ಯ ಸಹಕಾರ ನೀಡಬೇಕು ಎಂದು ತಿಳಿಸಲಾಯಿತು.

37. GPDP ಯಡಿ Provsional ಮೊತ್ತವನ್ನು ಗ್ರಾಮ ಪಂಚಾಯತಿವಹಿ ಆಯಾಯ ಕಾಮಗಾರಿ ಘಟಕಕ್ಕೆ ದಾಖಲಿಸಬೇಕು.

38. ಆನ್‌ಲೈನ್ ನಲ್ಲಿ ಪೂರ್ಣಗೊಳಿಸಿರುವ ಕಾಮಗಾರಿ ವರದಿಗಳನ್ನು ಅಂಗನವಾಡಿಗಳು, ವೈಯಕ್ತಿಕ ಫಲಾನುಭವಿಗಳು, ಎನ್.ಆರ್.ಎಮ್, ಕೃಷಿ ಎನ್.ಆರ್.ಎಮ್ ಬಾಬ್ತಿನ ವಿವರಗಳನ್ನು ತಕ್ಷಣ update ಮಾಡಬೇಕು. ಇದನ್ನು ಆಧರಿಸಿ ಭಾರತ ಸರ್ಕಾರ ರಾಷ್ಟ್ರಮಟ್ಟದಲ್ಲಿ ರಾಜ್ಯಗಳ ಸಾಧನೆ ನಿರ್ಧರಿಸುತ್ತಿದೆ. ಇಂತಹ ಸೂಕ್ಷ್ಮ ವಿಷಯಗಳಲ್ಲಿ ಜಿಲ್ಲಾಮಟ್ಟದ MIS-Co-ordinator ಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು.

39. 'ಜಲಾಮೃತ' ಯೋಜನೆಯ ಸಮಿತಿಗಳ ರಚನೆ ಕುರಿತು ಪ್ರತ್ಯೇಕ ಆದೇಶ ಹೊರಡಿಸಲಾಗುತ್ತದೆ. ಅದರನ್ವಯ ಉದ್ದೇಶಿತ ಚಟುವಟಿಕೆಗಳು ಸಮರ್ಪಕವಾಗಿ ಜಲ ಸಾಕ್ಷರತೆ, ಜಲಮೂಲಗಳ ಪುನರುಜ್ಜೀವನ, ಹೊಸ ಜಲಮೂಲಗಳ ನಿರ್ಮಾಣ ಮತ್ತು ಹಸಿರೀಕರಣ ಬಾಬ್ತಿನ ಪ್ರಕ್ರಿಯೆಗಳು ಮಾರ್ಗಸೂಚಿಗಳನ್ವಯ ಜನಾಂದೋಲನ ಮಾದರಿಯಲ್ಲಿ ಸಾಗಬೇಕು.

**(ಕ್ರಮ: ಆಯುಕ್ತರು ನರೇಗಾ, ಎಲ್ಲಾ ZP CEOಗಳು)**

40. 14ನೇ ಹಣಕಾಸಿನ ಆಯೋಗದ ಅನುದಾನವನ್ನು ಪ್ರಿಯಾ ಸಾಫ್ಟ್ ಮೂಲಕವೇ ಅನುಷ್ಠಾನಗೊಳಿಸಬೇಕು. ಪ್ರಿಯಾ ಸಾಫ್ಟ್ ಅಡಿ DSC ಆಧಾರಿತ ಪಾವತಿಯನ್ನು ಬೆಂಬಲಿಸದಿರುವ ಬ್ಯಾಂಕ್‌ಗಳಿಂದ ಖಾತೆಗಳನ್ನು ವರ್ಗಾಯಿಸಿ ಬೆಂಬಲಿಸುವ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಲು CEOಗಳಿಗೆ ಸೂಚಿಸಲಾಯಿತು. ಇದರ ಬಗ್ಗೆ ಪ್ರತ್ಯೇಕ ಸುತ್ತೋಲೆ ಕೂಡ ಹೊರಡಿಸಲಾಗುವುದು.

41. e-Office ಸಲುವಾಗಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳು EMD-format ಹಾಗೂ E-mail Id ತಕ್ಷಣ ಕಳುಹಿಸಬೇಕು. Procurement ಕುರಿತಂತೆ ಜಾಗ್ರತೆಯಾಗಿ ಏTPP ಕಾಯ್ದೆ ಮತ್ತು ನಿಯಮಗಳನುಸಾರ ಕ್ರಮ ವಹಿಸಬೇಕು.

42. ಸರ್ಕಾರದ ಎಲ್ಲಾ ಪ್ರಮುಖ ಆದೇಶ/ಸುತ್ತೋಲೆ ಮತ್ತು ನಡವಳಿಗಳನ್ನು RDPR website www.rdpr.kar.nic.in ನಲ್ಲಿ ಪ್ರತಿಬಿಂಬಿಸಬೇಕು. ಪ್ರತಿನಿತ್ಯ ಜಿಲ್ಲಾ/ಕ್ಷೇತ್ರಮಟ್ಟದ ಅಧಿಕಾರಿಗಳು ಕಛೇರಿಯಿಂದ ತೆರಳುವ ಮುನ್ನ ಇವುಗಳನ್ನು ನೋಡಿ ಜಾಗ್ರತೆಯಾಗಿ ಕಾರ್ಯೋನ್ಮುಖರಾಗಬೇಕು.

**(ಕ್ರಮ: ಇ-ಆಡಳಿತ/ CEOs of ZPs)**

43. ಆಸ್ತಿ ತೆರಿಗೆ/ತೆರಿಗೆ ಸಂಗ್ರಹದಲ್ಲಿ ಉತ್ತಮ ಸಾಧನೆ ಮಾಡಿದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು, ಕೋಲಾರ, ಕೊಡಗು ಜಿಲ್ಲೆಗಳನ್ನು ಶ್ಲಾಘನೆ ಮಾಡಿ ಉಳಿದ ಪಂಚಾಯತ್‌ಗಳು ಇದೇ ಮಾದರಿಯಲ್ಲಿ ಸಾಧನೆ ಮಾಡಲು ತಿಳಿಸಲಾಯಿತು.

44. ಗ್ರಾಮ ಪಂಚಾಯತ್ Bill Collectors (ಕರ ವಸೂಲಿಗಾರರು) ಸರಿಯಾಗಿ ಕರ್ತವ್ಯ ನಿರ್ವಹಿಸದಿದ್ದಲ್ಲಿ PDO ಗಳು ಮತ್ತು EO ಶಿಸ್ತು ಕ್ರಮ ಕೈಗೊಳ್ಳಬೇಕು. ಅದೇ ರೀತಿ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಕಂಪ್ಯೂಟರ್ ಆಪರೇಟರ್‌ಗಳು ಫಲಾನುಭವಿಗಳ ಮಾಹಿತಿ, Job card ತೆಗೆಯುವಲ್ಲಿ ಹಾಗೂ ದೈನಂದಿನ ಗ್ರಾಮ ಪಂಚಾಯತಿಗಳ ಚಟುವಟಿಕೆಗಳಲ್ಲಿ ವಿಳಂಬ ಧೋರಣೆ, ಅಕ್ರಮವೆಸುವುದು ಮತ್ತು ತಾಂತ್ರಿಕ ನೆಪ ಹೇಳಿ ಅಸಹಕಾರ ತೋರುವಂತಹ ನಡವಳಿಕೆಗಳು ವರದಿಯಾಗಿದ್ದು, ಅಂತಹವರುಗಳ ಮೇಲೆ ಪರಿಶೀಲಿಸಿ ಶಿಸ್ತು ಕ್ರಮ ಕೈಗೊಂಡು ಜಿಲ್ಲೆಗಳಲ್ಲಿ ಎಚ್ಚರಿಕೆ ಸಂದೇಶ ನೀಡಲು ZP, CEO ಗಳು ಕ್ರಮ ವಹಿಸಬೇಕು.

**(ಕ್ರಮ: ನಿರ್ದೇಶಕರು, PR-I )**

45. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಖಜಾನೆ ವೆಚ್ಚ ದಾಖಲೆ ಆಧರಿಸಿ ಪ್ರಗತಿ ಪರಿಶೀಲನೆ ಮಾಡಿ DSS ಮಾಹಿತಿ ಹೊಂದಾಣಿಕೆ ಮಾಡಲು ಈಗಾಗಲೇ ತಿಳಿಸಿದ್ದು, ಸರ್ಕಾರದಿಂದ ಪತ್ರಗಳನ್ನು ಕಳುಹಿಸಿ ಎಚ್ಚರಿಕೆ ನೀಡಿದ್ದರೂ ಸಹ ಇನ್ನೂ 100% ಅಪ್‌ಡೇಟ್ ಆಗಿಲ್ಲ. ಈ ಕುರಿತು ವಿಳಂಬ ಮಾಡದೇ ಜಾಗ್ರತೆಯಾಗಿ ಮಾರ್ಚ್-31ರ ಸಾಧನೆಯನ್ನು ಏಪ್ರಿಲ್ 4ನೇ ತಾರೀಖಿನೊಳಗೆ DSS ಕಲಂ ನಲ್ಲಿ ಮಾಹಿತಿ ಇಂಧೀಕರಿಸಲು ತಿಳಿಸಲಾಯಿತು.

46. 2019-20ರ ಸಾಲಿನಲ್ಲಿ ಮುಂದುವರಿದ ಅಭಿವೃದ್ಧಿ ಕಾಮಗಾರಿಗಳನ್ನು ಆಯವ್ಯಯ ಹಂಚಿಕೆಯಂತೆ ಮುಂದುವರಿಸಿ (SCP/TSP ಸೇರಿದಂತೆ) ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆಯ ಸೂಚನೆಯಂತೆ ಆದೇಶ ಹೊರಡಿಸಲು ತಿಳಿಸಲಾಯಿತು.

**(ಕ್ರಮ: ಜಿಲ್ಲಾ ಪಂಚಾಯತ್, ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, IFA RDPR )**

ಪ್ರಸಕ್ತ ಬೇಸಿಗೆಯಲ್ಲಿ ಜನ ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಕೈಗೊಳ್ಳತಕ್ಕದ್ದು. ಈ ಸಂಬಂಧ ತುರ್ತು ದುರಸ್ಥಿ, ಪುನಶ್ಚೇತನ, ಖಾಸಗಿ Borewellಗಳ ಸೇವೆ ಪಡೆಯುವುದು, ಸಾಗಾಣಿಕೆ ಮುಖೇನ ನೀರು ಪೂರೈಕೆ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಕೊಳವೆಬಾವಿ ಕೊರೆಯುವಂತಹ ಪ್ರಕ್ರಿಯೆಗಳನ್ನು ಸ್ಥಳೀಯ ಅಗತ್ಯತೆ ಆಧರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಜಿಲ್ಲೆಗೆ ಲಭ್ಯವಾಗಿರುವ ಅನುದಾನದ ಮಿತಿಯೊಳಗೆ ತುರ್ತು ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಬೇಕು. ಕುಡಿಯುವ ನೀರಿನ ವಸ್ತುಸ್ಥಿತಿ ಪರಿವೀಕ್ಷಣೆಯನ್ನು **ಜೂನ್.2019ರವರೆಗೆ** ಪ್ರತಿವಾರ ಹೋಬಳಿ/ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡಬೇಕು. ಹಾಗೂ **ಸಹಾಯವಾಣಿ ಕೇಂದ್ರಗಳು** ಚುರುಕಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕು. ಈ ಸಂಬಂಧ ಅಗತ್ಯವಿರುವ Nodal ಅಧಿಕಾರಿಗಳನ್ನು ನೇಮಿಸಿ ಎಲ್ಲಾ CEOಗಳು ಆದೇಶ ಹೊರಡಿಸಬೇಕು.

ಈ ಮೇಲ್ಕಂಡ ಸೂಚನೆಗಳನ್ನು ಪಾಲನೆ ಮಾಡಿ ಅನುಪಾಲನಾ ವರದಿಗಳನ್ನು ನೀಡಲು ಸೂಚಿಸಿ ವಿಡಿಯೋ ಸಂವಾದವನ್ನು ಮುಕ್ತಾಯಗೊಳಿಸಲಾಯಿತು.

29/03/2019

**ಸರ್ಕಾರದ ಪ್ರಧಾನ ಕಾರ್ಯದರ್ಶಿ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

**ಸಂಖ್ಯೆ:ಗ್ರಾಅಪ/31/ಯೋಉಮಾ/2019** **ದಿನಾಂಕ: 29/03/2019**

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ, ಬೆಂಗಳೂರು.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ. ಬೆಂಗಳೂರು.
4. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್, ಬೆಂಗಳೂರು.
5. ನಿರ್ದೇಶಕರು, ಪಂಚಾಯತ್ ರಾಜ್- 1/ಪಂಚಾಯತ್ ರಾಜ್-2/ಸ್ವ.ಉ.ಕಾ/ಗ್ರಾಮ ವಿಕಾಸ/ಯೋಉಮಾ PMI/ ಇ-ಆಡಳಿತ/ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ ರಾಜ್ ಇಲಾಖೆ, ಬೆಂಗಳೂರು.
6. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಕನ್ನಿಂಗ್‌ಹ್ಯಾಂ ರಸ್ತೆ, MSIL Building, ಬೆಂಗಳೂರು.
7. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
9. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.

11. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು.
12. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.